ಕರ್ನಾಟಕ ಸರ್ಕಾರ

(ಪಿ.ಆರ್.ಪಿ.67)

| |
|---|
| ಹೇಳಿಕೆ ಹಾಳೆ |
| (ಆರ್.ಪಿ.ಸಂಖ್ಯೆ 57) |
| ನಮೂನೆ ಸಂಖ್ಯೆ 4 |

**ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ಹಾಗೂ ಸ್ಪೆಷಲ್ ನ್ಯಾಯಾಧೀಶರ ನ್ಯಾಯಾಲಯ, ಹಾಸನ**

**ಸ್ಪೆಷಲ್ ಕೇಸ್ ನಂಬರ್ : 28/2010**

**ಫ್ರಾಸಾ- 29 ಚಾಸಾ- 35**

ಸಾಕ್ಷಿದಾರರ ಹೆಸರುಃ : ಪಿ ಚಿದಾನಂದನಾಯಕ

ತಂದೆಯ ಹೆಸರುಃ : ಪಿ ಕೃಷ್ಣ ನಾಯಕ್

ವಯಸ್ಸುಃ : 69 ವರ್ಷ

ಉದ್ಯೋಗಃ : ನಿವೃತ್ತ ನೌಕರ

ವಾಸ : ಮೂಡಬಿದರೆ

**ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಬೋಧಿಸಿದ ದಿನಾಂಕ: 07-07-2025:**

**ಮುಖ್ಯ ವಿಚಾರಣೆಃ ಸರ್ಕಾರದ ಪರವಾಗಿ ಮಾನ್ಯ ವಿಶೇಷ ಅಭಿಯೋಜಕರಿಂದಃ**

ನಾನು 2007 ರಿಂದ 2010 ರ ವರೆಗೆ ನಾನು ಸಕಲೇಶಪುರ ಎಸ್ ಬಿ ಎಂ ನಲ್ಲಿ ಮ್ಯಾನೇಜರ್ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ. ಆ ಸಮಯದಲ್ಲಿ ಸದರಿ ಬ್ಯಾಂಕ್ ನಲ್ಲಿ ಎನ್.ಎಸ್ ಮೆಡಿಕಲ್ ಮಾಲೀಕರಾದ ಎಸ್ ಎನ್ ರವೀಂದ್ರನಾಥ್ ರವರು ಖಾತೆಯನ್ನು ಹೊಂದಿದ್ದರು. ಸದರಿ ಖಾತೆಯ ನಂಬರ್ 01190207299 ಹೊಸ ನಂಬರ್ 54030056717 ಆಗಿತ್ತು. ಸುಮಾರು 14-15 ವರ್ಷಗಳ ಹಿಂದೆ ಸಕಲೇಶಪುರ ಪೊಲೀಸರು ಸದರಿ ಬ್ಯಾಂಕ್ ಖಾತೆಗೆ ಸಂಬಂಧಪಟ್ಟ ಮಾಹಿತಿಯನ್ನು ಹಾಗೂ ಸದರಿ ಖಾತೆಯಿಂದ ಡಿ ಡಿ ಖರೀದಿಸಿದ್ದರೆ ಎಂದು ಮಾಹಿತಿ ಕೇಳಿದರು. ಅದರಂತೆ ನಾನು ಸದರಿ ಡಿ ಡಿ ಗಳಿಗೆ ಸಂಬಂಧಿಪಟ್ಟ ಚಲನ್ ಮತ್ತು ಚೆಕ್ ನ ಯಥಾ ಪ್ರತಿಯನ್ನು ನೀಡಿರುತ್ತೇನೆ. ರೂ. 50,000/- ಗಿಂತ ಹೆಚ್ಚಿನ ಡಿ ಡಿ ಖರೀದಿಸಿದ್ದಲ್ಲಿ ಚೆಕ್

ಮೂಲಕ ಡ್ರಾ ಮಾಡಿ ನಂತರ ಡಿ ಡಿ ಪಡೆಯಬೇಕು. ಒಟ್ಟು 6 ಡಿ ಡಿ ಗೆ ಸಂಬಂಧಿಸಿದ ಚೆಕ್ ಮತ್ತು ಚಲನ್ ಯಥಾ ನಕಲು ಹಾಗೂ ಇನ್ನೂ 2 ಡಿ ಡಿ ಗೆ ಸಂಬಂಧಿಸಿ ಚೆಕ್ ನೀಡಿದ್ದು ಅವುಗಳನ್ನು ನಿ.ಪಿ-54 ರಿಂದ 61 ಎಂದು ಗುರುತಿಸಲಾಯಿತು. ಇದನ್ನು ದಿನಾಂಕ 08.07.2010 ರ ಪತ್ರದೊಂದಿಗೆ ಉಪ ಪೊಲೀಸರ್ ಅಧೀಕ್ಷಕರಿಗೆ ನೀಡಿರುತ್ತೇನೆ. ಸದರಿ ಪತ್ರವನ್ನು ನೋಡುತ್ತಿದ್ದು ಅದನ್ನು ನಿಪಿ-62 ಎಂದು ಮತ್ತು ಸಹಿಯನ್ನು ನಿಪಿ-62 ಎ ಎಂದು ಗುರುತಿಸಲಾಯಿತು.

2. ಸದರಿ ಬ್ಯಾಂಕ್ ಖಾತೆ ಹೊಂದಿರುವ ವ್ಯಕ್ತಿಯನ್ನು ನೋಡಿ ಗುರುತಿಸುತ್ತೇನೆ. ಈ ದಿನ ನ್ಯಾಯಾಲಯದ ಮುಂದೆ ಇದ್ದಾರೆ ಸಾಕ್ಷಿ ಗುರುತಿಸಿದ ವ್ಯಕ್ತಿ ನ್ಯಾಯಾಲಯದ ಮುಂದೆ ಇರುವ ಒಂದನೇ ಆರೋಪಿತ.

**ಪಾಟೀಸವಾಲುಃ** ಆರೋಪಿಗಳ ಪರ ವಕೀಲರು ಗೈರು ಹಾಜರಿದ್ದು ಆರೋಪಿತರು ಪಾಟೀ ಸವಾಲಿಗೆ ಕಾಲಾವಕಾಶ ಕೋರಿರುತ್ತಾರೆ. ಸಾಕ್ಷಿಯು ತನಗೆ ಬಸ್ ನಲ್ಲಿ ಪ್ರಯಾಣ ಮಾಡಲು ಅನಾರೋಗ್ಯವಿದ್ದ ಕಾರಣ ನಾನು ಬಾಡಿಗೆ ವಾಹನದಲ್ಲಿ ಬಂದಿರುವುದಾಗಿ ಹೇಳಿರುತ್ತಾರೆ. ಸಾಕ್ಷಿಗೆ ರೂ. **2000/-** ಭತ್ಯೆಯನ್ನು ಆರೋಪಿತರಿಬ್ಬರು ಕೊಡುವ ಷರತ್ತಿನ ಮೇರೆಗೆ ಪಾಟೀ ಸವಾಲು ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು)

**ಓ.ಹೇ.ಕೇ.ಸ.ಇದೆ.**

**ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ಹಾಗೂ ಸ್ಪೆಷಲ್**

**ನ್ಯಾಯಾಧೀಶರು, ಹಾಸನ.**